ಕೇಂದ್ರ ಸರಕಾರದ ಶಿಕ್ಷಣ ನೀತಿಯ ಬಗ್ಗೆ

೧೨೨ (೫೬೨೫) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

೧) ಕೇಂದ್ರ ಸರ್ಕಾರದ ಶಿಕ್ಷಣ ನೀತಿಯ ಬಗ್ಗೆ ರಾಜ್ಯ ಸರ್ಕಾರ ಭಿನ್ನಾಭಿಪ್ರಾಯಗಳನ್ನು ವ್ಯಕ್ತ ಪಡಿಸಿದೆಯಲ್ಲವೇ ?

೨) ಹಾಗಿದ್ದಲ್ಲಿ ಭಿನ್ನಾಭಿಪ್ರಾಯಗಳ ವಿವರಗಳೇನು ?

೩) ನವೋದಯ ಶಾಲೆಗಳನ್ನು ಕೇಂದ್ರ ಸರ್ಕಾರದ ವಿದ್ಯಾ ನೀತಿಗನುಗುಣವಾಗಿ ರಾಜ್ಯದಲ್ಲಿ ತೆರೆಯಲು ಸರ್ಕಾರ ನಿರ್ಧರಿಸಿದೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

೧) ಹೌದು. ಕೆಲವೊಂದು ವಿಷಯಗಳಲ್ಲಿ ರಾಜ್ಯ ಸರ್ಕಾರ ಭಿನ್ನಾಭಿಪ್ರಾಯ ವ್ಯಕ್ತ ಪಡಿಸಿದೆ.

೨) ವಿವರಗಳನ್ನು ಒದಗಿಸಿದೆ.

೩) ಹೌದು.

ಚಿಕ್ಕ ಹಳ್ಳಿಗೆ ಹಾಂಬರಂ ರಸ್ತೆ ಸಂಪರ್ಕ ಕಲ್ಪಿಸುವ ಬಗ್ಗೆ

೧೨೪ (೪೫೯) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ಚಿಕ್ಕಹಳ್ಳಿ ಗ್ರಾಮಕ್ಕೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬಿದ್ದಾಗಿ ಭೇಟಿ ನೀಡಿ ಸೂಕ್ತ ರಸ್ತೆ ಸಂಪರ್ಕವನ್ನು ಕಲ್ಪಿಸಿ ರಸ್ತೆಗೆ ಡಾಂಬರ್ ಹಾಕಿಸುವುದಾಗಿ ಕಳೆದ ಅಧಿವೇಶನದಲ್ಲಿ ಆಶ್ವಾಸನೆಯನ್ನು ನೀಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಈ ಯೋಜನೆಯನ್ನು ಎಷ್ಟು ಸಮಯದಲ್ಲಿ ಕಾರ್ಯಗತಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

(ಅ ಮತ್ತು ಆ)

ಈ ರಸ್ತೆಯು ಐಸಿಆರ್‌ಪಿ ಕಾರ್ಯಕ್ರಮದಲ್ಲಿ ತೆಗೆದುಕೊಂಡ ಗ್ರಾಮಾಂತರ ರಸ್ತೆ. ಇದನ್ನು ಎನ್. ಆರ್. ಇ. ಪಿ. ಅಥವಾ ಆರ್. ಎಲ್. ಇ. ಜಿ. ಪಿ. ಯೋಜನೆಯಲ್ಲಿ ಸರ್ವಋತು ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದಿಂದ ೨೭-೮-೮೬ರ ಪತ್ರದಲ್ಲಿ ಮುಖ್ಯ ಇಂಜಿನಿಯರ್‌ರವರಿಗೆ ಸೂಚನೆ ಕೊಡಲಾಯಿತು.

ಇ) ಈ ರಸ್ತೆಯ ಅಭಿವೃದ್ಧಿ ಕೆಲಸವನ್ನು ೩. ೫೦ ಲಕ್ಷರೂಗಳ ಅಂದಾಜಿನಲ್ಲಿ ಎನ್. ಆರ್. ಇ. ಪಿ. ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಲು ಬೆಂಗಳೂರು ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳ ಅನುಮತಿಯನ್ನು ಕೋರಬೇಕೆಂದು ಎಕ್ಸಿಕ್ಯೂಟೀವ್ ಇಂಜಿನಿಯರವರು ಕೋರಿದ್ದಾರೆ. ವಿಶೇಷ ಜಿಲ್ಲಾಧಿಕಾರಿಯವರು ಅನುಮೋದಿಸಿದ ಪೈಲ್ ಕೆಲಸವನ್ನು ತೆಗೆದುಕೊಳ್ಳಲಾಗುತ್ತದೆ.

ರಾಜಾಜಿನಗರದ ಎರಡನೇ ಬಡಾವಣೆಯಲ್ಲಿರುವ ಸರಕಾರಿ ಪ್ರೌಢಶಾಲೆ

೧೨೫ (೪೯೮) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ರಾಜಾಜಿನಗರದ ಎರಡನೇ ಬ್ಲಾಕಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳೆಷ್ಟು ?

ಆ) ಈ ಶಾಲೆಯಲ್ಲಿ ಸಾಕಷ್ಟು ಕೊಠಡಿಗಳು ಇಲ್ಲದಿರುವುದು, ನೀರು, ವಿದ್ಯುತ್‌ದೀಪ, ಶೌಚಾಲಯಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಶಾಲೆಯಲ್ಲಿನ ತೊಂದರೆಗಳನ್ನು ಕ್ಷೇತ್ರದ ಶಾಸಕ, ಶಾಲೆಯ ಆಡಳಿತ ವರ್ಗ ಮತ್ತು ಸಾರ್ವಜನಿಕರು ಆಗಿಂದಾಗ್ಗೆ ಸರ್ಕಾರದವರ ಗಮನಕ್ಕೆ ತಂದಿದ್ದಾರೆಯೇ ?

ಈ) ಹಾಗಿದ್ದಲ್ಲಿ, ಈ ತೊಂದರೆಗಳನ್ನು ಕೂಡಲೇ ನಿವಾರಿಸಲು ಸರ್ಕಾರದವರು ಕೈಗೊಂಡ ಅಥವಾ ಕೈಗೊಳ್ಳುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಆ) ಶಿರ್ಷ್.

ಆ) ಬಂದಿದೆ.

ಇ) ತಂದಿದ್ದಾರೆ.

ಈ) ಕಟ್ಟಡದ ದುರಸ್ತಿ ಕಾರ್ಯವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಗೆ ಸೂಚನೆ ನೀಡಿದೆ.

ಸರಕಾರಿ ವಸತಿ ಗೃಹದಲ್ಲಿರುವವರ ಕುಂದು ಕೊರತೆಗಳನ್ನು ನಿವಾರಿಸುವ ಬಗ್ಗೆ

೧೨೬ (ಳಳರಿ ಎ) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕಳೆದ ಸಾಲಿನಲ್ಲಿ ಬೆಂಗಳೂರಿನ ವಿಲ್ಸನ್‌ಗಾರ್ಡನ್ ಹಾಗೂ ರಾಜಾಜಿನಗರದಲ್ಲಿರುವ ವಸತಿ ಗೃಹಗಳಲ್ಲಿರುವವರ ತೊಂದರೆಗಳನ್ನು ಪರಿಶೀಲಿಸಲು ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಬಂದಿದ್ದು ನಿಜವಲ್ಲವೆ ?

ಆ) ಪಟ್ಟಿಯ ಭೇಟಿಯ ಕಾಲದಲ್ಲಿ ನಿವಾಸಿಗಳ ಕುಂದು ಕೊರತೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಆದೇಶ ನೀಡಿದ ಕೆಲಸ ಕಾರ್ಯಗಳಾವುವು ?

ಇ) ಆವರ ಆದೇಶದಂತೆ ಇದುವರೆಗೂ ಸದರಿ ವಸತಿ ಗೃಹಗಳಲ್ಲಿ ಕೈಗೊಂಡಿರುವ ಕೆಲಸ ಕಾರ್ಯಗಳಾವುವು? (ರಾಜಾಜಿನಗರ ಹಾಗೂ ಹೊಂಬೇಗೌಡ ನಗರದಲ್ಲಿ ಕೈಗೊಂಡಿರುವ ಕೆಲಸಗಳ ಪ್ರತ್ಯೇಕ ಪಟ್ಟಿ ನೀಡುವುದು) ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ನಿಜ. ಮಾನ್ಯ ಲೋಕೋಪಯೋಗಿ ಸಚಿವರು ಈ ಮನೆಗಳ ಪರಿಶೀಲನೆ ಮಾಡಿದ್ದಾರೆ.

ಆ) ಕಳಗೆ ಕಾಣಿಸಿರುವ ಕೆಲಸಗಳಿಗೆ ಸಂಬಂಧಿಸಿದಂತೆ ಆದೇಶ ನೀಡಲಾಗಿದ್ದು ತು.

ರಾಜಾಜಿನಗರದಲ್ಲಿರುವ ಮನೆಗಳಿಗೆ

೧) ಸರ್ವೋಪಯೋಗಿ ವಿದ್ಯುತ್ ಸಂಪರ್ಕ ಏರ್ಪಡಿಸಂವುದು

೨) ಶೌಚಾಲಯದ ಸ್ಥಳಾಂತರ ಮತ್ತು ಅಭಿವೃದ್ಧಿ.

೩) ಆವರಣ ಗೋಡೆ ಮತ್ತು ಒಳಚರಂಡಿ ವ್ಯವಸ್ಥೆ ದುರಸ್ತಿ.

ವಿಲ್ಸನ್‌ಗಾರ್ಡನ್ಸ್ (ಹೊಂಬೇಗೌಡನಗರ) ಮನೆಗಳಿಗೆ

೧) ನೀರು ಸರಬರಾಜು ವ್ಯವಸ್ಥೆ ಉತ್ತಮಪಡಿಸಲು ನಿರೆತ್ತುಪ ಯಂತ್ರಗಳನ್ನು ಅಳವಡಿಸುವುದು ಮತ್ತು ಹಳೇ ಕೊಳಾಯಿಗಳನ್ನು ಬದಲಾಯಿಸುವುದು.

೨) ಆವರಣಗೋಡೆಗಳ ದುರಸ್ತಿ.

೩) ಶೌಚಾಲಯಗಳು ಮತ್ತು ಸ್ನಾನದ ಕೊಠಡಿಗಳ ದುರಸ್ತಿ.